ಉ) ಇನ್ನೂ ಹೆಚ್ಚಿನ ಲಾಭಕ್ಕಾಗಿ ಈ ರೇಷ್ಮೆ ಮಾರಾಟ ಮಾಡದೆ ಉಳಿಸಿಕೊಳ್ಳಲಾಗಿದೆಯೇ?

ಊ) ಹೀಗೆ ಉಳಿದಿರುವ ದಾಸ್ತಾನು ಮುಂದೆ ದರ ಬರದೆ ಮಾರಾಟದಲ್ಲಿ ಹೆಚ್ಚಿನ ನಷ್ಟವಾದಲ್ಲಿ ಸರ್ಕಾರ ತೆಗೆದುಕೊಳ್ಳುವ ಕ್ರಮಗಳಾವುವು?

ಶ್ರೀ ಹೆಚ್. ಎಂ. ರೇವಣ್ಣ (ರೇಷ್ಮೆ ಹಾಗೂ ಜವಳಿ ಸಚಿವರು):

ಅ) ಸರ್ಕಾರಿ ರೇಷ್ಮೆ ಕಾರ್ಖಾನೆಗಳಲ್ಲಿ ಫೆಬ್ರವರಿ 2003ರ ಮಾಹೆಯ ಅಂತ್ಯಕ್ಕೆ ಮಾರಾಟವಾಗದೇ ಉಳಿದಿರುವ ರೇಷ್ಮೆ ದಾಸ್ತಾನು 45,362 ಕೆ.ಜಿ.

ಆ) ಫೆಬ್ರವರಿ 2003ರ ಮಾಹೆಯ ಅಂತ್ಯಕ್ಕೆ 7152 ಕೆ.ಜಿ. ಕಚ್ಚಾರೇಷ್ಮೆ ಮಾರಾಟ ಮಾಡಲಾಗಿದೆ. ಉತ್ಪಾದನಾ ವೆಚ್ಚ ಹೆಚ್ಚಾಗಿದ್ದು, ಮಾರಾಟ ದರ ಬಹಳ ಕಡಿಮೆ ಇರುವ ಪ್ರಯುಕ್ತ ರೇಷ್ಮೆ ಮಾರಾಟವಾಗುತ್ತಿಲ್ಲ.

ಇ) ಹೌದು.

ಈ) ಈಗಿನ ಸರಾಸರಿ ದರದಂತೆ ಒಂದು ಕೆ.ಜಿ ರೇಷ್ಮೆ ಮಾರಾಟದಿಂದ ರೂ. 1926/- ನಷ್ಟವಾಗುತ್ತದೆ. ಮಾರಾಟ ದರ ದೊರೆತ ನಂತರವೇ ಖಚಿತ ಮಾಹಿತಿ ದೊರೆಯುತ್ತದೆ.

ಉ) ಇಲ್ಲ. ಸರ್ಕಾರಿ ಸಂಸ್ಥೆಗಳಾದ ಕೆಹೆಚ್‌ಡಿಸಿ, ಕೆಎಸ್‌ಐಸಿ, ಕೆಎಸ್‌ಎಂಬಿ ಇವರೆ ಪ್ರಮುಖ ಖರೀದಿದಾರರಾಗಿದ್ದು, ಅವರ ಬೇಡಿಕೆಗೆ ಅನುಗುಣವಾಗಿ ರೇಷ್ಮೆ ಮಾರಾಟ ಮಾಡಲಾಗುತ್ತಿದೆ.

ಊ) ಉತ್ಪಾದನಾ ವೆಚ್ಚ ಹೆಚ್ಚು ಇದ್ದುದರಿಂದ ನಷ್ಟ ಪೂರ್ತಿಯಾಗಿ ಕಡಿಮೆ ಮಾಡಲು ಅವಕಾಶ ಕಡಿಮೆಯಿದ್ದು, ರೇಷ್ಮೆಗೆ ಹೆಚ್ಚಿನ ಬೆಲೆ ಬಂದಲ್ಲಿ ಸ್ವಲ್ಪ ಮಟ್ಟಿಗೆ ನಷ್ಟವನ್ನು ಕಡಿಮೆಗೊಳಿಸಬಹುದಾಗಿರುತ್ತದೆ.

ಕರಾವಳಿ ಜಿಲ್ಲೆಗಳಲ್ಲಿ ವಿಶೇಷ ಆರ್ಥಿಕ ವಲಯ

273(2617) ಶ್ರೀ ಯೋಗೀಶ್‌ಭಟ್. ಎನ್ (ಮಂಗಳೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರಾವಳಿ ಜಿಲ್ಲೆಗಳಲ್ಲಿ ಆರಂಭ ಆಗಲಿರುವ ವಿಶೇಷ ಆರ್ಥಿಕ ವಲಯವನ್ನು ಅಭಿವೃದ್ಧಿಗೊಳಿಸಲು ಕೈಗೊಂಡ ಕ್ರಮಗಳೇನು; ಇದಕ್ಕೆ ತಗಲುವ ವೆಚ್ಚ ಎಷ್ಟು?

ಆ) ಯಾವ ವಾಣಿಜ್ಯ ಕೈಗಾರಿಕಾ ರಫ್ತೋದ್ಯಮ : ಯೋಜನೆಗಳನ್ನು ಈ ಮೂಲಕ ಅಭಿವೃದ್ಧಿಗೊಳಿಸಲು ಯೋಜಿಸಲಾಗಿದೆ?

ಇ) ಎಷ್ಟು ನಿರುದ್ಯೋಗಿ ಯುವಕರಿಗೆ ಕೆಲಸ ಸಿಗುವ ಸಾಧ್ಯತೆಗಳಿವೆ ಹಾಗೂ ಈ ಯೋಜನೆ ಯಾವಾಗ ಆರಂಭವಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಕಡಲ ತೀರದಲ್ಲಿ ವಿಶೇಷ ಆರ್ಥಿಕ ವಲಯವನ್ನು ಸ್ಥಾಪಿಸಲು ಕೋಷ್ವಲ್ ಆಚೆಂಡಾ ಟಾಸ್ಕ್ ಫೋರ್ಸ್ ಮತ್ತು ಕೆನರಾ ವಾಣಿಜ್ಯ ಸಂಸ್ಥೆಯವರು ಜಂಟಿಯಾಗಿ ಕಾರ್ಯೋನ್ಮಖರಾಗಿದ್ದಾರೆ. ಕೇಂದ್ರ ಸರ್ಕಾರಕ್ಕೆ ಪ್ರಾರಂಭಿಕ ಟೆಕ್ನೋ ಎಕಾನಮಿಕ್ ಸಾಧ್ಯತಾ ವರದಿ ತಯಾರಿಸಿ ಕಳುಹಿಸಲು ನಿರ್ಧರಿಸಿರುತ್ತಾರೆ.

ಆ) ಈ ವಿವರಗಳು ಸಾಧ್ಯತಾ ವರದಿ ತಯಾರಾದ ನಂತರ ತಿಳಿಯುತ್ತದೆ.

ಇ) ಮೇಲಿನಂತೆ